ಅಧಿಕಾರಿಗಳ ಜೊತೆ ಮಾಡನಾಡಿ ನಾಳೆ ಉತ್ತರ ಕೊಡಬೇಕು ದಯಮಾಡಿ.

ಅಧ್ಯಕ್ಷರು: ವಿ.ಸುನೀಲ್ ಕುಮಾರ್.

3648

ಶ್ರೀ ಸುನೀಲ್ ಕುಮಾರ್.ವಿ.(ಕಾರ್ಕಳ)

ಮಾನ್ಯ ಶ್ರೀ ಪಿ.ಜಿ.ಆರ್.ಸಿಂದ್ಯಾ (ಬಾರಿ, ಮಧ್ಯಮ ಹಾಗೂ ಸಣ್ಣಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು)

ಕ್ರ. ಸಂ.	ಪ್ರಶ್ನೆ	ಉತ್ತರ
ಅ.	ಉಡುಪಿ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಒದಗಿಸಬೇಕಾದ ತಾಲ್ಲೂಕುವಾರು ಸಬ್ಸಿಡಿ ಮೊತ್ತ ವೆಷ್ಟು, ಎಷ್ಟು ವರ್ಷಗಳಿಂದ ಬಾಕಿ ಇದೆ.	ಉಡುಪಿ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಒದಗಿಸ ಬೇಕಾದ ತಾಲ್ಲೂಕುವಾರು ಸಬ್ಸಿಡಿ ಮೊತ್ತದ ವಿವರ ಈ ಕೆಳಗಿನಂತಿರುತ್ತದೆ. ತಾಲ್ಲೂಕು ಘಟಕಗಳಸಂಖ್ಯೆ ಮೊತ್ತ(ರೂ.ಕೋಟಿ) ಉಡುಪಿ 473 7.26 ಕಾರ್ಕಳ 283 3.94 ಕುಂದಾಪುರ 347 4.68 ಒಟ್ಟು 1103 15.88 ದಿನಾಂಕ:1.1.99ರಿಂದ ರಾಜ್ಯ ಸಹಾಯಧನ ಬಿಡುಗಡೆಗೆ ಬಾಕಿ ಇರುತ್ತದೆ. ಇದರಲ್ಲಿ ದಿನಾಂಕ: 1.1.09 ರಿಂದ 31.03.2009 ರವರೆಗಿನ ಸಹಾಯಧನ ಮಂಜೂರಾತಿಯ ಶೇ.50 ರಂತೆ ಉಡುಪಿ ಜಿಲ್ಲೆಯ 557 ಘಟಕಗಳಿಗೆ (ಕೋಳಿ ಸಾಕಾಣಿಕೆ, ಇಟ್ಟಿಗೆ ಹಾಗೂ ಸ್ವಂತ ಬಂಡವಾಳ ಘಟಕಗಳನ್ನು ಹೊರತುಪಡಿಸಿ ರೂ.5.60 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಕ್ರ. ಸಂ.	ಪ್ರಶ್ನೆ	ಉತ್ತರ
೮.	ರೋಗಗ್ರಸ್ತ ಘಟಕಗಳ ಪುನಃಶ್ಚೇತನಕ್ಕೆ ಸರ್ಕಾರ ಕೈಗೊಂಡ ಕ್ರಮಗಳಾ ವುವು: ಕಾರ್ಕಳ ತಾಲ್ಲೂ ಕಿನ ಪೂರ್ಣ ವಿವರ ಗಳನ್ನು ಒದಗಿಸುವುದು.	ರೋಗಗ್ರಸ್ತ ಪುನಃಶ್ಚೇತನ ಕೈಗಾರಿಕಾ ನೀತಿಯಂತೆ ಸರ್ಕಾರದ ಆದೇಶ ಸಂಖ್ಯೆ ಸಿಐ 167 ಎಸ್.ಪಿ.ಐ. 2001 ದಿ:25/09/2002ರಂತೆ ಪುನಃಶ್ಚೇತನಗೊಂಡ ರೋಗಗ್ರಸ್ತ ಕೈಗಾರಿಕೆಗಳಿಗೆ ಈ ಕೆಳಕಂಡ ರಿಯಾಯಿತಿಗಳನ್ನು ನೀಡಲಾಗುತ್ತದೆ. 1. ಘಟಕದ ಪುನಃಶ್ಚೇತನ ಯೋಜನಾ ವೆಚ್ಚದ ಶೇ.25ರಷ್ಟು ಹಣವನ್ನು ರೂ.2.50ಲಕ್ಷಗಳನ್ನು ಮಿತಿಗೊಳಪಟ್ಟು ಬಡ್ಡಿರಹಿತ ಬೀಜಧನ ಸಾಲದ ರೂಪದಲ್ಲಿ ನೀಡಲಾಗುತ್ತದೆ. 2. ಕೆ.ಪಿ.ಟಿ.ಸಿ.ಎಲ್.ಗೆ ಬಾಕಿ ಇರುವ ಎನ್ ರ್ಜಿಬಿಲ್‌ಮೊತ್ತವನ್ನು ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಪಾವತಿ ಮಾಡುವುದು ಮತ್ತು ಬಾಕಿಗೆ ಹಾಕಲಾಗುವ ಬಡ್ಡಿ ದರವನ್ನು ತಿಂಗಳಿಗೆ ಶೇ.ಅರ್ಧ ಕಡಿಮೆ ಮಾಡಲಾಗುವುದು. 3. ಘಟಕವು ಮುಚ್ಚಿರುವ ಅವಧಿಗೆ ಫಿಕ್ಸ್‌ಡ್ ಚಾರ್ಜಸ್/ಡಿಮಾಂಡ್ ಚಾರ್ಜಸ್‌ಗಳನ್ನು ಕೆಪಿಟಿಸಿಎಲ್ ಹಾಕುವುದಿಲ್ಲ. 4. ವಾಣಿಜ್ಯ ತೆರಿಗೆ ಇಲಾಖೆಗೆ ಬಾಕಿ ಇರುವ ತೆರಿಗೆ ಮೊತ್ತವನ್ನು ತಿಂಗಳಿಗೆ ಶೇಕಡಾ ಅರ್ಧ ಬಡ್ಡಿದರ ದೊಂದಿಗೆ ಆರು ಅರ್ಧ ವಾರ್ಷಿಕ ಕಂತುಗಳಲ್ಲಿ ಪಾವತಿ ಮಾಡುವುದು. 5. ಕೈಗಾರಿಕಾ ಮುಚ್ಚಿರುವ ಅವಧಿಗೆ ಕೆಪಿಟಿಸಿಎಲ್ ಮತ್ತು ವಾಣಿಜ್ಯ ತೆರಿಗೆ ಇಲಾಖೆ ಬಡ್ಡಿಯನ್ನು ಲೆಕ್ಕಾಚಾರ ಮಾಡುವುದಿಲ್ಲ. 6. ಕೈಗಾರಿಕೆಗಳು ಭವಿಷ್ಯದಲ್ಲಿ ನೀಡ ಬೇಕಾಗಿರುವ ತೆರಿಗೆಯನ್ನು ಯಾವುದೇ ಬಡ್ಡಿ ಇಲ್ಲದೇ ಮೂರು ವರ್ಷಗಳವರೆಗೆ ಮುಂದೂಡಲಾಗುವುದು. ಕಾರ್ಕ ತಾಲ್ಲೂಕಿನಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಒಟ್ಟು 24 ಘಟಕಗಳಿಗೆ ಒಟ್ಟು ಮೊತ್ತ ರೂ. 163 ಲಕ್ಷ ಸಾಲ ಮರು ಪಾವತಿಯ ಅವಧಿಯನ್ನು ಪರಿಷ್ಕರಿಸಲಾಗಿರುತ್ತದೆ. ಸಹಾಯಧನ ಮಂಜೂರು ಮಾಡಲಾದ ಒಟ್ಟು 283 ಘಟಕಗಳನ್ನು ಜಂಟಿ ತಪಾಸಣೆ ಮಾಡಲಾಗಿದ್ದು, ಇದರಲ್ಲಿ 5 ಘಟಕಗಳು ಮಾತ್ರ ಮುಚ್ಚಿರುತ್ತವೆ

ಕ್ರ. ಸಂ.	ಪ್ರಶ್ನೆ	ಉತ್ತರ
ಇ.	ನಷ್ಟದಲ್ಲಿರುವ ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರ ಕೈಗೊಳ್ಳುವ ಕ್ರಮಗಳಾವುವು	ನಷ್ಟದಲ್ಲಿರುವ ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ರೋಗಗ್ರಸ್ತ ಕೈಗಾರಿಕೆಗಳ ಪುನಃಶ್ಚೇತನಕ್ಕೆ ಮೇಲ್ಕಂಡಂತೆ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲಾಗುವುದು.
ಈ.	ಕಾರ್ಕಳ ತಾಲ್ಲೂಕಿನಲ್ಲಿ ಸಹಾಯಧನಕ್ಕೆ ಗುರುತಿಸಿರುವ ಕೈಗಾರಿಕಾ ಘಟಕಗಳಾವುವು ಹಾಗೂ ಯಾವಾಗ ಸಹಾಯಧನವನ್ನು ನೀಡಲಾಗುತ್ತದೆ?	283 ಘಟಕಗಳಿಗೆ ರೂ.3.94 ಕೋಟಿ ಸಹಾಯಧನ ಬಿಡುಗಡೆಗೆ ಬಾಕಿ ಇರುತ್ತದೆ ಮತ್ತು ಈಗಾಗಲೇ ಈ ಹಿಂದೆ ದಿನಾಂಕ: 1.1.99ರಿಂದ 31.3.2003ರವರೆಗೆ ಮಂಜೂರಾಗಿರುವ ಘಟಕಗಳಲ್ಲಿ ಮಂಜೂರಾತಿಯ ಶೇ. 50ರಂತೆ 162 ಘಟಕಗಳಿಗೆ ರೂ.1.22 ಕೋಟಿಗಳು(ಕೋಳಿ ಸಾಕಾಣಿಕೆ, ಇಟ್ಟಿಗೆ ಹಾಗೂ ಸ್ವಂತ ಬಂಡವಾಳ ಘಟಕಗಳನ್ನು ಹೊರತುಪಡಿಸಿ) ಬಿಡುಗಡೆಯಾಗಿರುತ್ತದೆ; ಸರ್ಕಾರದ ಆದೇಶದ ದಿನಂಕ:14.03.2005ರ ಅನ್ವಯ ರೂ.65.00 ಕೋಟಿ ಮಂಜೂರಾಗಿದ್ದು, ಈ ಹಣವನ್ನು ಬಿಡುಗಡೆಗೆ ಕ್ರಮ ವಹಿಸಿದೆ. ಈ ಮೊತ್ತವನ್ನು ಸರ್ಕಾರವು ಸದ್ಯದಲ್ಲೇ ಹೊರಡಿಸುವ ಮಾರ್ಗ ಸೂಚಿಯಂತೆ ವಿತರಿಸಲಾಗುವುದು.

ಶ್ರೀ ವಿ.ಸುನೀಲ್‌ಕುಮಾರ್: ಮಾನ್ಯ ಅಧ್ಯಕ್ಷರೆ ಉತ್ತರಗಳನ್ನು ಒದಗಿಸಿದ್ದಾರೆ, ಸಚಿವರು ನಾಲ್ಕೈದು ಸಂಗತಿಗಳನ್ನು ಕ್ಲಿಯರ್ ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಕಾರ್ಕಳ ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆಗಳಿಗೆ 3.04 ಕೋಟಿ ರೂಪಾಯಿ ಸಹಾಯಧನ ಬಾಕಿ ಇದೆಯೇ ಎಂದು ಹೇಳಿದ್ದಕ್ಕೆ ಇದೆ ಎಂದು ತಿಳಿಸಿದ್ದಾರೆ. ಯಾವ ದಿನದ ಒಳಗೆ ಬಾಕಿ ಸಬ್ಸಿಡಿ ಹಣ ಕೊಡುತ್ತಾರೆಂದು ಕ್ಲಿಯರ್ ಮಾಡಬೇಕು. ಎರಡನೇಯದು, ಗ್ರಾಮೀಣ ಪ್ರದೇಶಗಳಲ್ಲಿ ಇರುವಂತಹ

ಕೈಗಾರಿಕೆಗಳು ಇವತ್ತು ಬಹಳ ದೊಡ್ಡ ಪ್ರಮಾಣದಲ್ಲಿ ಎದುರಿಸುತ್ತಿರುವ ಸಮಸ್ಯೆ ಎಂದರೆ ವಿದ್ಯುತ್ ಸಮಸ್ಯೆ. ನಗರ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳಿಗೂ ಗ್ರಾಮೀಣ ಪ್ರದೇಶಗಳ ಕೈಗಾರಿಕೆಗಳಿಗೂ ವ್ಯತ್ಯಾಸ ಇದೆ. ಆದರೆ ಉಡುಪಿ ಜಿಲ್ಲೆಯ ಬಹಳ ದೊಡ್ಡ ಸಮಸ್ಯೆ ಎದುರಾಗಿರುವುದು ಎಂದರೆ, ಜನರೇಟರ್‌ಗೆ ಸರ್ಕಾರ ತೆರಿಗೆ ವಸೂಲಿ ಮಾಡುತ್ತಿರುವುದು. 10 ಹೆಚ್‌ಪಿಗಿಂತ ಜಾಸ್ತಿ. ಸಾಮರ್ಥ್ಯ ಇರುವ ಜನರೇಟರ್‌ಗಳಿಗೆ ಕೂಡ ಸರ್ಕಾರ ಇವತ್ತು ತೆರಿಗೆ ವಸೂಲಿ ಮಾಡುತ್ತದೆ. ತೆರಿಗೆ ವಿನಾಯಿತಿ ಕೊಡುವ ದೃಷ್ಟಿಯಿಂದ ಸಣ್ಣ ಕೈಗಾರಿಕೆಗಳಿಗೆ ಯಾವ ಸರ್ಕಾರ ಕ್ರಮ ಕೈಗೊಂಡಿದೆ? ಮೂರನೆಯದು ಸರ್ಕಾರದ ಉತ್ತರದಲ್ಲಿ ತಿಳಿಸಿರುವಂಥದ್ದು ಕೋಳಿ ಸಾಕಾಣಿಕೆ ಮತ್ತು ಇಟ್ಟಿಗೆ ಘಟಕಗಳಿಗೆ ಅದನ್ನು ಹೊರತುಪಡಿಸಿ ಉಳಿದಂತಹ ಘಟಕಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡುತ್ತಾರೆಯೇ? ಇನ್ನು ಮೂರನೆಯದಾಗಿ ಸರ್ಕಾರ ಉತ್ತರದಲ್ಲಿ ಕೋಳಿ ಸಾಕಾಣಿಕೆ ಮತ್ತು ಇಟ್ಟಿಗೆ ಘಟಕಗಳನ್ನು ಹೊರತುಪಡಿಸಿ ಉಳಿದಂಥ ಘಟಕಗಳಿಗೆ ನಾವು ಸಹಾಯ ಧನವನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಸಣ್ಣ ಕೈಗಾರಿಕೆಗಳ ವ್ಯಾಪ್ತಿಗೆ ಕೋಳಿ ಸಾಕಾಣಿಕೆ ಮತ್ತು ಇಟ್ಟಿಗೆ ಘಟಕಗಳು ಬರುವುದಿಲ್ಲವೆ? ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು. ಕೊನೆಯದಾಗಿ ಹೇಳುವುದೇನೆಂದರೆ ಕಳೆದ ಎರಡು ತಿಂಗಳ ಹಿಂದೆ ತಮ್ಮದೇ ಒಂದು ಹೇಳಿಕೆಯಲ್ಲಿ ಮಂಗಳೂರಿನಲ್ಲಿ ಗೋಡಂಬಿ ಘಟಕವನ್ನು ಆರಂಭ ಮಾಡುವುದಕ್ಕೆ ನಾವು ಬೇಡಿಕೆಯನ್ನು ಸಲ್ಲಿಸಿದ್ದೇವೆ ಎಂದು ಹೇಳಿದ್ದಿರಿ. ಆ ಗೋಡಂಬಿ ಘಟಕವನ್ನು ಆರಂಭ ಮಾಡುವಂಥ ಹಿನ್ನಲೆಯಲ್ಲಿ ಸರ್ಕಾರ ಈಗ ಯಾವ ಹಂತದಲ್ಲಿದೆ, ಅದಕ್ಕೆ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವಲ್ಲಿ ಸರ್ಕಾರ ಹೆಜ್ಜೆಯನ್ನು ಇಟ್ಟಿದೆಯೇ ಎನ್ನುವ ಬಗ್ಗೆ ಸರ್ಕಾರ ಸ್ಪಷ್ಟಪಡಿಸಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಮ್ಮ ಮೊದಲನೇಯ ಉಪ ಪ್ರಶ್ನೆಯಲ್ಲಿ ಸಬ್ಸಿಡಿ ಹಣವನ್ನು ಏನು ಬಾಕಿ ಬಿಡುಗಡೆ ಮಾಡಬೇಕಾಗಿದೆಯೋ ಅದನ್ನು ಯಾವಾಗ ಬಿಡುಗಡೆ ಮಾಡುತ್ತೀರಿ ಎಂದು ಕೇಳಿದ್ದಾರೆ. ಈ ವರ್ಷ ಈಗಾಗಲೇ ನಾವು 80 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಈ ತಿಂಗಳಲ್ಲಿ ಅಂದರೆ ಮಾರ್ಚ್ ತಿಂಗಳಲ್ಲಿ 65 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಕೊಟ್ಟಿದ್ದಾರೆ.

ಅದನ್ನು ಯಾವ ರೀತಿಯಲ್ಲಿ ಬಿಡುಗಡೆ ಮಾಡಬೇಕು ಎಂಬುದರ ಬಗ್ಗೆ ನಿಯಮಾವಳಿಗಳನ್ನು ರಚನೆ ಮಾಡುತ್ತಿರುವುದರಿಂದ ಸದ್ಯದಲ್ಲಿಯೇ ಆ 65 ಕೋಟಿ ರೂಪಾಯಿಗಳು ಬಿಡುಗಡೆ ಆಗುತ್ತದೆ. ಮುಂದಿನ ಆರ್ಥಿಕ ವರ್ಷದಲ್ಲಿ ಹಣಕಾಸಿನ ಇತಿಮಿತಿಗಳನ್ನು ನೋಡಿಕೊಂಡು ಉಳಿದಿರತಕ್ಕಂಥ ಹಣವನ್ನು ಬಿಡುಗಡೆ ಮಾಡುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ. ಇನ್ನೂ 10 ಹೆಚ್‌ಪಿ ಉಪಯೋಗಿಸತಕ್ಕಂಥ ಸಣ್ಣ ಕೈಗಾರಿಕೆಗಳ ಮೇಲೆ ವಿಧಿಸುವ ತೆರಿಗೆ ವಿಚಾರದ ಬಗ್ಗೆ ಹೇಳಿದ್ದಾರೆ. ನಾನು ಈಗಾಗಲೇ ಮಾನ್ಯ ಹಣಕಾಸಿನ ಸಚಿವರ ಜೊತೆ ಇದರ ಬಗ್ಗೆ ಮಾತನಾಡಿದ್ದೇನೆ. ಇದು ತೆರಿಗೆಗೆ ಸಂಬಂಧಪಟ್ಟ ವಿಚಾರ ವಾಗಿರುವುದರಿಂದ ಇದು ಸರ್ಕಾರದ ಪರಿಶೀಲನೆಯಲ್ಲಿದೆ. ಇದರ ಬಗ್ಗೆ ನಾನು ಈಗ ಖಚಿತವಾಗಿ ಉತ್ತರವನ್ನು ಕೊಡುವುದಕ್ಕೆ ಆಗದೇ ಹೋದರೂ ಕೂಡ ಈ ರೀತಿ ಸಬ್ಸಿಡಿಯನ್ನು ಹಿಂದುಳಿದಿರತಕ್ಕಂಥ ಅತಿ ಹಿಂದುಳಿದಿರತಕ್ಕಂಥ ಗ್ರಾಮೀಣ ಪ್ರದೇಶದ ಸಣ್ಣ ಕೈಗಾರಿಕೆಗಳಿಗೆ ಸಹಾಯ ಮಾಡುವುದಕ್ಕೆ ನಾವು ಪರಿಶೀಲನೆಯನ್ನು ಮಾಡುತ್ತಿದ್ದೇವೆ. ಇನ್ನೂ ಇಟ್ಟಿಗೆ, ಕೋಳಿ ಸಾಕಾಣಿಕೆ ಮತ್ತು ಸೆಲ್ಫ್ ಫೈನಾನ್ಸಿಂಗ್ ವಿಷಯಗಳ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಈಗಾಗಲೇ ಇದರ ಬಗ್ಗೆ ಮಾನ್ಯ ಯಡಿಯೂರಪ್ಪನವರು ಪ್ರಶ್ನೆಯನ್ನು ಎತ್ತಿದ್ದರು. ಈಗಾಗಲೇ ಹಣಕಾಸಿನ ಸಚಿವರು ಉತ್ತರ ಕೊಡುವಾಗ ಇದರ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆ ಮಾಡುತ್ತಿದ್ದೇವೆ. ಇಟ್ಟಿಗೆ, ಕೋಳಿ ಸಾಕಾಣಿಕೆ ಮತ್ತು ಸೆಲ್ಫ್ ಫೈನಾನ್ಸಿಂಗ್, ಈ ಮೂರಕ್ಕೂ ಇದುವರೆಗೂ ಕೂಡ ಸಬ್ಸಿಡಿ ಕೊಟ್ಟಿಲ್ಲ. ಸಬ್ಸಿಡಿ ಕೊಡಬೇಕು ಎನ್ನುವ ವಿಚಾರ ಸರ್ಕಾರದ ಮುಂದೆ ಪರಿಶೀಲನೆಯಲ್ಲಿದೆ. ಅದರ ಬಗ್ಗೆ ಇನ್ನೂ ಒಂದು ತಿಂಗಳೊಳಗೆ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ. ಇನ್ನೂ ಕಡೆಯದಾಗಿ ಉಡುಪಿ ಜಿಲ್ಲೆ ಹಾಗೂ ಕಾರವಾರ ಜಿಲ್ಲೆಗಳಲ್ಲಿ ಹಾಗೂ ಎಲ್ಲೆಲ್ಲಿ ಗೋಡಂಬಿಯನ್ನು ಬೆಳೆಯುತ್ತಾರೋ ಅಲ್ಲಿ ಒಂದು ಕ್ಲಸ್ಟರ್‌ನ್ನು ಮಾಡಬೇಕು ಎಂದು ಸರ್ಕಾರ ಉದ್ದೇಶಪಟ್ಟಿದೆ. ಅದಕ್ಕೆ ಕೇಂದ್ರ ಸರ್ಕಾರದ ಸಹಕಾರವನ್ನೂ ಕೂಡ ನಾವು ಕೋರುತ್ತಿದ್ದೇವೆ. ಆ ಒಂದು ಕ್ಲಸ್ಟರ್‌ನ್ನು ಮಾಡುವುದಕ್ಕೆ ಬೇಕಾದ ನೀಲಿ ನಕ್ಷೆಯನ್ನು ತಯಾರು ಮಾಡುವ ಹಂತದಲ್ಲಿ ಸರ್ಕಾರ ಇದೆ.

ಶ್ರೀ ಸುನೀಲ್‌ಕುಮಾರ್: ಮಾನ್ಯ ಅಧ್ಯಕ್ಷರೇ, ಕಾರ್ಕಳದಲ್ಲಿರುವಂಥ ಇಂಡಸ್ಟ್ರೀಯಲ್ ಎಸ್ಟೇಟ್‌ನಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಬಹಳ ದೊಡ್ಡ ಪ್ರಮಾಣದಲ್ಲಿದೆ. ಅಲ್ಲಿರುವಂಥ ಕಟ್ಟಡಗಳಿಗೆ ಯಾವುದೇ ಹೊಸ ಕೈಗಾರಿಕೆಗಳು ಬರುವುದಕ್ಕೆ ಆಗುತ್ತಿಲ್ಲ. ಇದಕ್ಕೆ ಕಾರಣ ಅಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯೇ ಆಗಿದೆ. ಆದಕಾರಣ ಅವುಗಳನ್ನು ಅಭಿವೃದ್ಧಿ

ಗೊಳಿಸುವಂಥ ದೃಷ್ಟಿಯಿಂದ ಸರ್ಕಾರ ಆ ಕಡೆಗೆ ವಿಶೇಷ ಗಮನವನ್ನು ಕೊಡ ಬೇಕು. ಆ ನಿಟ್ಟಿನಲ್ಲಿ ಸರ್ಕಾರ ಗಮನಿಸಬೇಕೆನ್ನುವ ವಿನಂತಿಯನ್ನು ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕೆ.ಐ.ಎ.ಡಿ.ಬಿ ಹಾಗೂ ಕೆ.ಎಸ್.ಎಸ್.ಐ.ಡಿ.ಸಿ, ಈ ಎರಡೂ ಸಂಸ್ಥೆಗಳು ಇಂಡಸ್ಟ್ರೀಯಲ್ ಎಸ್ಟೇಟ್‌ಗಳನ್ನು ಮಾಡಿದ್ದಾರೆ. ಈ ಎರಡೂ ರೀತಿಯ ಇಂಡಸ್ಟ್ರೀಯಲ್ ಎಸ್ಟೇಟ್ ಗಳಲ್ಲಿ ಬೇಕಾಗಿರತಕ್ಕಂಥ ಮೂಲಭೂತ ಸೌಕರ್ಯಗಳನ್ನು ಡೆವಲಪ್ ಮಾಡು ವುದಕ್ಕೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ. ರಸ್ತೆಗಳನ್ನು ಮಾಡುವುದಕ್ಕೆ, ಅಲ್ಲಿರತಕ್ಕಂಥ ಎಫ್ಲುಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್‌ಗಳನ್ನು ಹೊಸದಾಗಿ ಪ್ರಾರಂಭ ಮಾಡುವುದಕ್ಕೆ ಕೆಲವು ಕಡೆಗಳಲ್ಲಿ ದೀಪದ ವ್ಯವಸ್ಥೆ ಹಾಗೂ ಒಳ್ಳೆಯ ಗುಣಮಟ್ಟದ ನಿರಂತರ ಪವರ್‌ನ್ನು ಕೊಡುವುದಕ್ಕೆ ಕೂಡ ಕ್ರಮವನ್ನು ತೆಗೆದುಕೊಳ್ಳು ತ್ತಿದ್ದೇವೆ. ಆ ದೃಷ್ಟಿಯಲ್ಲಿ ನಾವು ಕಾರ್ಕಳದಲ್ಲಿಯೂ ಇರತಕ್ಕಂಥ ಸಮಸ್ಯೆಗಳನ್ನು ತಿಳಿದುಕೊಂಡು ಅವುಗಳನ್ನು ಪರಿಹರಿಸುವುದಕ್ಕೆ ನಾವು ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ಕೋಳಿ ಸಾಕಾಣಿಕೆ ದಾರರಿಗೆ ಆಗಿರುವ ಅನ್ಯಾಯ ಹಾಗೂ ತೊಂದರೆಗಳ ಬಗ್ಗೆ ನಾನೂ ಕೂಡ ಹಿಂದೆ ಕೋಳಿ ಸಾಕಾಣಿಕೆದಾರನಾಗಿದ್ದರಿಂದ ಅದರ ಅನುಭವ ಹಿನ್ನಲೆಯಲ್ಲಿ ಹೇಳ ಬಯಸುವುದೇನೆಂದರೆ ಇವರುಗಳಿಗೆ ಸಬ್ಸಿಡಿ ಕೊಡುವಲ್ಲಿ ಸರ್ಕಾರ ಏಕೆ ವಿಫಲ ವಾಗಿದೆ? ಸರ್ಕಾರಕ್ಕೆ ಇದರ ಬಗ್ಗೆ ಮಲತಾಯಿ ಧೋರಣೆ ಏಕೆ? ಬೇರೆ ಕೈಗಾರಿಕೆಗಳಿಗೆ ಸಬ್ಸಿಡಿ ಕೊಡುತ್ತಿರುವಾಗ ಕೋಳಿ ಸಾಕಾಣಿಕೆಗೆ ಸಬ್ಸಿಡಿಯನ್ನು ಏಕೆ ಕೊಡುತ್ತಿಲ್ಲ? ಮಾನ್ಯ ಹಿರಿಯ ಸಚಿವರಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ, ದಯಮಾಡಿ ಕೋಳಿ ಫಾರಂ ಕೊಳೆತುಹೋಗುವ ಹಾಗೆ ಮಾಡಬೇಡಿ, ಕೋಳಿ ಫಾರಂನ್ನು ಉದ್ಧಾರ ಮಾಡುವ ನಿಟ್ಟಿನಲ್ಲಿ, ಕೋಳಿ ಸಾಕಾಣಿಕೆಯನ್ನು ಉದ್ಧಾರ ಮಾಡುವ ದಿಕ್ಕಿನಲ್ಲಿ ತಾವು ಕಾರ್ಯೋನ್ಮುಖರಾಗಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇದಕ್ಕೆ ತಮ್ಮ ಉತ್ತರ ಏನು ಎಂಬ ಬಗ್ಗೆ ಹೇಳಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ವಿಲೇಜ್ ಇಂಡಸ್ಟ್ರಿಯಲ್ಲಿ ಸ್ಟೋನ್ ಕ್ರಶಿಂಗ್ ಇಂಡಸ್ಟ್ರೀ ಕೂಡ ಇದೆ. ಇದಕ್ಕೂ ಸಬ್ಸಿಡಿಯನ್ನು ಬಿಡುಗಡೆ ಮಾಡಿಲ್ಲ. ಇದಕ್ಕೆ ಸಬ್ಸಿಡಿಯನ್ನು ಸರ್ಕಾರ ಮಾಡುತ್ತದೆಯೋ ಅಥವಾ ಇದನ್ನು ಸರ್ಕಾರ ಎಕ್ಸ್‌ಕ್ಲೂಡ್ ಮಾಡಿದೆಯೋ ಹೇಗೆ ಎಂಬುದನ್ನು ಹೇಳಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಕೋಳಿ ಸಾಕಾಣಿಕೆಗೆ ಸಂಬಂಧಪಟ್ಟಂತೆ, ಇಟ್ಟಿಗೆಗೆ ಸಂಬಂಧಪಟ್ಟಂತೆ, ಸೆಲ್ಪ್ ಫೈನಾನ್ಸ್‌ಗೆ ಸಂಬಂಧಪಟ್ಟಂತೆ ಇದುವರೆಗೂ ಕೂಡ ನಾವು ಹಣವನ್ನು ಬಿಡುಗಡೆ ಮಾಡಿಲ್ಲ. ಮಾಡಬೇಕೇ, ಬಿಡಬೇಕೇ, ಕೊಟ್ಟರೆ ಯಾವ ಪ್ರಮಾಣದಲ್ಲಿ

ಕೊಡಬೇಕು ಎನ್ನುವುದರ ಬಗ್ಗೆ ನಾವು ಸಚಿವ ಸಂಪುಟದಲ್ಲಿ ತೀರ್ಮಾನವನ್ನು ಮಾಡುತ್ತೇವೆ. ಎರಡು ಅಭಿಪ್ರಾಯಗಳಿವೆ. ಕಿಲ್ನ್ ಇಂಡಸ್ಟ್ರೀಯಲ್ಲಿ ಈ ಕಿಲ್ನ್‌ನು ಹಾಕಿರತಕ್ಕಂಥವರಿಗೆ ಕೊಡಬೇಕೇ ಅಥವಾ ಅವರಿಗೆ ಮಾತ್ರ ಕೊಡಬೇಕೆ, ಉಳಿದವರಿಗೆ ಕೊಡಬಾರದೇ ಎಂದು ಈ ರೀತಿ ಏನಿದೆ. ಅದೇ ರೀತಿಯಲ್ಲಿ ಕೋಳಿ ಸಾಕಾಣಿಕೆಗೆ ಸಂಬಂಧಪಟ್ಟಂತೆ ಬರೀ ಮಾಂಸಕ್ಕೋಸ್ಕರ ಮಾಡುವ ಕೋಳಿ ಸಾಕಾಣಿಕೆಗೆ ಮಾತ್ರ ಕೊಡಬೇಕೇ ಅಥವಾ ಮೊಟ್ಟೆಗಳನ್ನು ಮಾಡತಕ್ಕಂಥದ್ದರ ಬಗ್ಗೆ ಇರುವ ಕೋಳಿ ಸಾಕಾಣಿಕೆಗೆ ಕೊಡಬೇಕೇ ಎನ್ನುವುದರ ಬಗ್ಗೆ ಚರ್ಚೆ ನಡೆಯುತ್ತಿದೆ. ಇನ್ನೂ ಮಾನ್ಯ ಶ್ರೀರಾಮರೆಡ್ಡಿಯವರು ಜಲ್ಲಿ ಕ್ರಶಿಂಗ್‌ಗೆ ಕೊಟ್ಟಿದ್ದಾರೋ ಇಲ್ಲವೋ ಎಂಬುದರ ಬಗ್ಗೆ ಕೇಳಿದ್ದಾರೆ. ನನಗೆ ತಿಳಿದಿರುವಂತೆ ಸ್ಟೋನ್ ಕ್ರಶಿಂಗ್‌ಗ್ ಏನು ಸಬ್ಸಿಡಿಯನ್ನು ಬಿಡುಗಡೆ ಮಾಡಬೇಕೋ ಅದನ್ನು ಈಗಾಗಲೇ ಸೇರಿಸಿದ್ದಾರೆ. ಇದರಲ್ಲಿ ಯಾವ ಸ್ಪೆಸಿಫಿಕ್ ಕೇಸ್‌ನಲ್ಲಿ ಸಬ್ಸಿಡಿ ಬರಲಿಲ್ಲವೆಂಬ ಬಗ್ಗೆ ಮಾನ್ಯ ಶ್ರೀ ರಾಮರೆಡ್ಡಿಯವರು ನನಗೆ ತಿಳಿಸಿದರೆ ಖಂಡಿತವಾಗಿ ಅದನ್ನು ಬಿಡುಗಡೆ ಮಾಡುವುದಕ್ಕೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ನನಗೆ ತಿಳಿದಿರುವ ಹಾಗೆ 65 ಕೋಟಿ ರೂಪಾಯಿಗಳ ಹಣ ಬಿಡುಗಡೆ ಆಗಿದೆ. ಇನ್ನು ಹದಿನೈದು ದಿವಸಗಳಲ್ಲಿ, ಇದನ್ನು ಕೋಳಿ ಸಾಕಾಣಿಕೆಯವರಿಗೆ ಸೆಲ್ಫ್ ಫೈನಾನ್ಸ್‌ನವರಿಗೆ, ಬ್ರಿಕ್ಸ್‌ನವರಿಗೆ ಕೊಡಬೇಕು ಎನ್ನುವುದರ ಬಗ್ಗೆ ಮುಂದಿನ ಸಚಿವ ಸಂಪುಟದ ಸಭೆಯಲ್ಲಿ ಚರ್ಚೆ ಮಾಡಿ ಅದು ಆದನಂತರ ಒಂದು ನೀತಿಯನ್ನು ನಾವು ಮಾಡುತ್ತೇವೆ. ಆ ನೀತಿಯ ಪ್ರಕಾರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಕಳೆದ ಬಾರಿ 80 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದೆವು. ಮಾನ್ಯ ಅಶೋಕ್‌ರವರು ಮಾತನಾಡತಕ್ಕಂಥಹ ಸಂದರ್ಭದಲ್ಲಿ ಏಜೆಂಟ್ಸ್‌ಗಳು ಹುಟ್ಟಿಕೊಂಡುಬಿಡುತ್ತಾರೆ, ಕಮಿಶನ್ ತೆಗೆದುಕೊಂಡುಬಿಡಬಹುದು, ಆದ್ದರಿಂದ ಹುಷಾರಾಗಿರಬೇಕು ಎಂದು ಹೇಳಿದರು. ಆದಕಾರಣ ನಾವೂ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದೆವು. ಅದು ಆದನಂತರ ಸಿ.ಇ.ಒ.ಗಳು ಎಲ್ಲಾ ಯೂನಿಟ್‌ಗಳಿಗೆ ಹೋಗಿ ಅದು ಬದುಕಿದೆಯೋ, ಇಲ್ಲವೋ ಎಂಬ ಬಗ್ಗೆ ಎಲ್ಲಾ ಯೂನಿಟ್‌ಗಳನ್ನು ಇನ್ಸ್‌ಪೆಕ್ಷನ್ ಮಾಡಿದರು. ಇಷ್ಟೆಲ್ಲಾ ಮಾಡಿದ್ದರೂ ಎಲ್ಲೂ ಕೂಡ ನನಗೆ ಇದರ ಬಗ್ಗೆ ಒಂದು ಕಂಪ್ಲೆಂಟ್ ಕೂಡ ಇದುವರೆಗೆ ಬಂದಿಲ್ಲ. ಅದೇ ರೀತಿಯಲ್ಲಿ ಈ 65 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡತಕ್ಕಂಥ ಸಂದರ್ಭದಲ್ಲಿಯೂ ಕೂಡ ನೀತಿಯನ್ನು ಸದ್ಯದಲ್ಲಿಯೇ ನಾವು ತಯಾರು ಮಾಡುತ್ತೇವೆ.

ಅಧ್ಯಕ್ಷರು: ಮುಂದಿನ ಪ್ರಶ್ನೆ

ಶ್ರೀ ಚೆನ್ನಬಸಪ್ಪ: ಮಾನ್ಯ ಅಧ್ಯಕ್ಷರೇ, ನನ್ನದೊಂದು ಪ್ರಶ್ನೆ ಇದೆ.